ದಕ್ಷಿಣ ಭಾರತದಲ್ಲಿ ಮೊದಲ ವಜ್ರಾಭರಣ ಫ್ಯಾಕ್ಟರಿ ಆರಂಭವಾದದ್ದು ತಮಿಳುನಾಡಿನ ಕೊಯಮತ್ತೂರಿನಲ್ಲಿ. ಕೀರ್ತಿಲಾಲ್ ಕಾಳಿದಾಸ್ ಮೆಹ್ತಾ ಅವರ ಮಾರ್ಗದರ್ಶನದಲ್ಲಿ 1938ರಲ್ಲಿ ಶುರುವಾದ ಈ ವಜ್ರೋದ್ಯಮ ಸಂಸ್ಥೆ, ಇದೀಗ ಹೆಮ್ಮರವಾಗಿ ಬೆಳೆದಿದೆ. ಕೊಯಮತ್ತೂರಿನಲ್ಲಿ ಕೇವಲ ಒಂದು ಮಳಿಗೆಯೊಂದಿಗೆ ಆರಂಭಿಸಿದ ಕೀರ್ತಿಲಾಲ್ ವಜ್ರಾಭರಣ ಮಳಿಗೆ ಇದೀಗ ಬೆಂಗಳೂರು, ಚೆನ್ನೈ, ಮುಂಬಯಿ, ಹೈದರಾಬಾದ್, ಕೊಚ್ಚಿನ್, ವಿಜಯವಾಡ ಮುಂತಾದ 11 ಕೇಂದ್ರಗಳಿಗೆ ವಿಸ್ತರಣೆಯಾಗಿದೆ. ಇಡೀ ದಕ್ಷಿಣ ಭಾರತದಾದ್ಯಂತ ವ್ಯಾಪಿಸಿರುವ ಬಹುದೊಡ್ಡ ವಜ್ರಾಭರಣ ಮಾರಾಟ ಸಂಸ್ಥೆಯಿದು.


'ಈಗ ವಜ್ರದ ಒಡವೆ ಸಾಂಪ್ರದಾಯಿಕ, ಆಧುನಿಕ ಎರಡೂ ಮನೋಭಾವದ ಮಹಿಳೆಯರ ಮನಗೆದ್ದಿದೆ. ಹೀಗಾಗಿ ನಾಲ್ಕು ತಲೆಮಾರುಗಳ ಆಭರಣ ಗ್ರಾಹಕರು ನಮ್ಮ ಮಳಿಗೆಯಲ್ಲಿದ್ದಾರೆ. ಇದಕ್ಕೆ ಕಾರಣ ಸತತ ಪರಿಶ್ರಮ, ತಾಳ್ಮೆ, ಉದ್ಯಮದ ಮೇಲಿನ ಒಲವು ಹಾಗೂ ಪ್ರೀತಿ. ಮೇಲಾಗಿ ಗುಣಮಟ್ಟದೊಂದಿಗೆ ರಾಜಿ ಮಾಡಿಕೊಳ್ಳದ ಮನೋಭಾವ' ಎಂದು ಹೇಳುತ್ತಾರೆ ಕೊಯಮತ್ತೂರಿನ ಕೀರ್ತಿಲಾಲ್ಸ್ ವಜ್ರಾಭರಣ ಕಂಪೆನಿಯ ನಿರ್ದೇಶಕ ಸೂರಜ್ ಶಾಂತಕುಮಾರ್.

'ಅದು 1939ನೇ ಇಸವಿ. ಇಡೀ ದಕ್ಷಿಣ ಭಾರತದಲ್ಲಿ ವಜ್ರದ ಒಡವೆ ಸಿಗುವ ಮಳಿಗೆಯೇ ಇರಲಿಲ್ಲ. ಈ ಸಮಯದಲ್ಲಿ ಮೊದಲ ವಜ್ರಾಭರಣ ಮಳಿಗೆಯನ್ನು ಕೊಯಮತ್ತೂರಿನಲ್ಲಿ ತೆರೆಯುವ ಮೂಲಕ ಕೀರ್ತಿಲಾಲ್ ಮೊದಲ ದಾಖಲೆ ನಿರ್ಮಿಸಿದೆ. ಆಗ ಚಿನ್ನಾಭರಣಗಳನ್ನು ಕೊಂಡಂತೆ ವಜ್ರವನ್ನು ಖರೀದಿಸಲು ಯಾವ ಗ್ರಾಹಕರೂ ಮುಂದೆ ಬರುತ್ತಿರಲಿಲ್ಲ. ಇಂಥ ಸಮಯದಲ್ಲಿ ಗ್ರಾಹಕರಿಗೆ ಮನವರಿಕೆ ಮಾಡಿಕೊಟ್ಟು ಉತ್ತೇಜನ ನೀಡುವ ಪ್ರಯತ್ನ ಮಾಡಲಾಯಿತು. ಮನೆ ಮನೆಗೆ ವಜ್ರದ ಒಡವೆ ತೆಗೆದುಕೊಂಡು ಹೋಗಿ ಮನವೊಲಿಸಿ ಖರೀದಿಸಲು ಪ್ರೋತ್ಸಾಹ ನೀಡುತ್ತಿದ್ದದ್ದು ಕೀರ್ತಿಲಾಲ್ ಕಂಪೆನಿಯ ಹೆಗ್ಗಳಿಕೆ' ಎನ್ನುತ್ತಾರೆ ಸೂರಜ್.

'ಕಚ್ಚಾ ವಜ್ರವನ್ನು ಬೆಲ್ಜಿಯಂನಿಂದ ಆಮದು ಮಾಡಿಕೊಂಡು ಕಟಿಂಗ್, ಡಿಸೈನಿಂಗ್, ಪಾಲಿಶಿಂಗ್.. ಹೀಗೆ ಹಲವಾರು ಹಂತಗಳನ್ನು ದಾಟಿ ಅಂತಿಮವಾಗಿ ಗ್ರಾಹಕರವರೆಗೆ ತಲುಪುವವರೆಗೆ ಈ ಉದ್ಯಮದಲ್ಲಿ ಕುಸುರಿ ಕೆಲಸಗಾರರ ಶ್ರಮ ಅಪಾರ. ಕಸ್ಟಮರೈಸ್ಡ್ ಜ್ಯುವೆಲರಿ ಕೀರ್ತಿಲಾಲ್‌ನ ಮತ್ತೊಂದು ವಿಶೇಷತೆ. ಖರೀದಿಸುವವರನ್ನೇ ಮಳಿಗೆಗೆ ಕರೆಸಿ ಅವರ ಮನಸ್ಸಿನಲ್ಲಿರುವ ವಿನ್ಯಾಸದ ಕಲ್ಪನೆಗಳನ್ನು ಕೇಳಿ, ಅದಕ್ಕೆ ತಕ್ಕಂತೆ ಆಭರಣಗಳನ್ನು ಮಾಡಿಕೊಡುತ್ತೇವೆ. ಜತೆಗೆ ಹೊಸ ತಂತ್ರಜ್ಞಾನ ಬಳಸಿ 'ಐಪಾಡ್ ಆ್ಯಪ್' ಮೂಲಕವೂ ವಿನ್ಯಾಸಗಳನ್ನು ಆಯ್ಕೆ ಮಾಡಲಾಗುತ್ತದೆ' ಎನ್ನುತ್ತಾರೆ ಅವರು.

'ಗ್ರಾಹಕರ ಆಯ್ಕೆಗೇ ನಮ್ಮ ಮೊದಲ ಆದ್ಯತೆ..' ಇದು ನಮ್ಮ ಮಾರುಕಟ್ಟೆ ತಂತ್ರವೂ ಹೌದು. ಶೇ.100ರಷ್ಟು ಗ್ರಾಹಕ ಸ್ನೇಹಿ ಕೆಲಸವನ್ನು ಮಾಡುವುದು ನಮ್ಮ ಆಶಯ' ಎಂಬುದು ಕೀರ್ತಿಲಾಲ್ಸ್‌ನ ಮಾರುಕಟ್ಟೆ ಅಧಿಕಾರಿ ಟಿ.ಕೆ. ಸುಧಾಕರ್ ಅವರು ನೀಡುವ ವಿಶ್ಲೇಷಣೆ.

'ಇನ್ನೋವೇಟಿವ್ ಡಿಸೈನ್, ಕಸ್ಟಮರೈಸ್ಡ್ ಆಭರಣ ಅತ್ಯುತ್ತಮ ಗುಣಮಟ್ಟದೊಂದಿಗೆ ಗ್ರಾಹಕರ ತಿಜೋರಿ ಸೇರುತ್ತದೆ. ಈ ನಿಟ್ಟಿನಲ್ಲಿ ಗುಣಮಟ್ಟದ ಒಡವೆಯನ್ನು ಪೂರೈಸುವುದು ನಮ್ಮ ಮೊದಲ ಆದ್ಯತೆ' ಎನ್ನುತ್ತಾರೆ ಸುಧಾಕರ್.


ಒಡವೆ ವಿನ್ಯಾಸಕ್ಕಾಗಿ ಕಟಿಂಗ್ ತಂತ್ರಜ್ಞಾನ

## ವಜ್ರಕ್ಕೆ ಮನಸೋತ ಪ್ರಣೀತಾ



ಮಾಡೆಲ್‌ಗಳು, ಸಿನಿಮಾ ನಟಿಯರು ವಜ್ರದ ಆಭರಣಕ್ಕೆ ಹೆಚ್ಚು ಒಲವು, ಒತ್ತಾಸೆ ತೋರಿಸುತ್ತಿದ್ದಾರೆ. ಹಾಗೆಯೇ ಸ್ಯಾಂಡಲ್‌ವುಡ್ ನಟಿ ಪ್ರಣೀತಾ ಸುಭಾಷ್, ಡೈಮಂಡ್ ಆಭರಣ ಪ್ರಿಯೆ.

'ವಜ್ರದ ಆಭರಣ ಎಂದರೆ ನನಗೆ ಮೊದಲಿನಿಂದಲೂ ಇಷ್ಟ. ಅದರಲ್ಲೂ ವಜ್ರದ ಉಂಗುರವನ್ನು ಬಹಳ ಪ್ರೀತಿಸುತ್ತೇನೆ. ನೆಕ್ಲೇಸ್, ಬ್ರೇಸ್‌ಲೆಟ್, ಓಲೆ ಮುಂತಾದವು ಎಲ್ಲ ರೀತಿಯ ಉಡುಪುಗಳಿಗೂ ಮ್ಯಾಚ್ ಆಗುತ್ತದೆ. ಸಲ್ವಾರ್, ಸೀರೆ, ಗೌನ್.. ಹೀಗೆ ಏನನ್ನೇ ಹಾಕಿಕೊಂಡರೂ ವಜ್ರದ ಆಭರಣ ಧರಿಸಿದಾಗ ಅದು ಸಖತ್ ಲುಕ್ ಕೊಡುತ್ತದೆ' ಎನ್ನುತ್ತಾರೆ ಪ್ರಣೀತಾ.

'ವಜ್ರದ ಆಭರಣ ಸಾಂಪ್ರದಾಯಿಕ ಮತ್ತು ಆಧುನಿಕ ಎರಡೂ ಮನೋಭಾವಕ್ಕೆ ಸರಿಯಾಗಿ ಹೊಂದುತ್ತದೆ. ವಜ್ರಾಭರಣದಲ್ಲಿ 'ಸಿಗ್ನೇಚರ್ ಪೀಸ್' ಎಲ್ಲ ಉಡುಪಿಗೂ ಸರಿಹೊಂದುತ್ತದೆ. ಇದನ್ನು ಧರಿಸಿದರೆ ಬೇರೆ ಯಾವುದೇ ಒಡವೆ ಹಾಕಿಕೊಳ್ಳುವ ಅಗತ್ಯವೂ ಇರುವುದಿಲ್ಲ. ಅಷ್ಟೊಂದು 'ಐ ಕ್ಯಾಚಿ' ಆಗಿರುತ್ತದೆ ವಜ್ರಾಭರಣ' ಎಂದು ವಜ್ರದ ಒಡವೆಗಳ ಬಗ್ಗೆ ತಮ್ಮದೇ ವ್ಯಾಖ್ಯಾನ ನೀಡುತ್ತಾರೆ ಪ್ರಣೀತಾ.



ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಶಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450